**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

<u>ಸಿ.ಸಿ.ನಂ. **2222/2022**</u>

ದಿನಾಂಕಃ **25.10.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಹನುಮಂತಪ್ಪ | ಪ್ರಾಸ.-3 |
| ತಂದೆಯ ಹೆಸರುಃ | ಗೋವಿಂದಪ್ಪ | |
| ವಯಸ್ಸು ಃ | 50 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಜಿಗಣೆಹಳ್ಳಿ | |

<u>ಮುಖ್ಯ ವಿಚಾರಣೆಃ ಪಿರ್ಯಾದಿ ಪರ ವಕೀಲರಾದ ಶ್ರೀಮತಿ ಬಿ ಆರ್ ಆರ್ ವಕೀಲರಿಂದ ಃ</u>

ಜಿಗಣೆಹಳ್ಳಿಯಲ್ಲಿ ನಾನು ಹುಟ್ಟಿದಾಗಿನಿಂದ ವಾಸವಾಗಿರುತ್ತೇನೆ. ಈ ಪ್ರಕರಣವನ್ನು ಯತೀಶ್ ರವರು ಮಂಜಪ್ಪ, ಹನುಮಂತಪ್ಪ, ಮಲ್ಲಪ್ಪ ಮತ್ತು ಇತರೇ ಆರೋಪಿಗಳ ವಿರುದ್ಧ ಹೂಡಿರುತ್ತಾರೆ. ಆರೋಪಿತರು ಊರಿನ ಮುಖ್ಯಸ್ಥರು. ಪಿರ್ಯಾದಿಗೆ ಜಿಗಣೆಹಳ್ಳಿ ಗ್ರಾಮದಲ್ಲಿ ಒಂದು ಮನೆ ಇದ್ದು, ಸದರಿ ಮನೆಗೆ ದಾರಿ ಬಿಟ್ಟುಕೊಡುವಂತೆ ಕೇಳಿದ್ದು, ಗ್ರಾಮಸ್ಥರು ದಾರಿ ಬಿಟ್ಟುಕೊಡುವುದಿಲ್ಲವೆಂದು ಗಲಾಟೆ ಮಾಡಿರುತ್ತಾರೆ. ಈ ಸಂಬಂಧ ಪೋಲಿಸ್ ಠಾಣೆಯಲ್ಲಿ ದೂರು ದಾಖಲಾಗಿರುತ್ತದೆ. ದೂರು ದಾಖಲಾದ ನಂತರ ಆರೋಪಿತರು ನಮ್ಮ ಊರಿನ ಬಸಪ್ಪ ರವರ ಮೂಲಕ ತಮಟೆ ಬಾರಿಸಿ ಪಿರ್ಯಾದಿಗೆ ಬಹಿಷ್ಕಾರ ಹಾಕಿ ಯಾರು ಪಿರ್ಯಾದಿಗೆ ಸಹಾಯ ಮಾಡಬೇಡಿ, ದೇವಸ್ಥಾನದಲ್ಲಿ ಪೂಜೆ ಮಾಡಿಕೊಡಬೇಡಿ ಎಂದು ಹೇಳಿಸಿರುತ್ತಾರೆ. ಈಗಲೂ ಸಹ ಪ್ರತಿವಾದಿಗೆ ಬಹಿಷ್ಕಾರ ಹಾಕಿದ್ದು ಅವರು ದೇವಸ್ಥಾನಕ್ಕೆ ಹೋದರೆ ಪೂಜೆ ಮಾಡಿಕೊಡುವುದಿಲ್ಲ.

<u>ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯಕೋರಿದ್ದರಿಂದ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.